# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2750 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28.03.2022 |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಚಿವರು |

| ಪ್ರಶ್ನೆ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿರುವ 2006 ರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಸಮಗ್ರವಾಗಿ ತಿದ್ದುಪಡಿ ಮಾಡಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | -ಹೌದು- |
| (ಆ) | 1978ರ ಕರ್ನಾಟಕ ನಾಗರೀಕ ಸೇವಾ ಕಾಯ್ದೆಯ ಪ್ರಕಾರ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೇಕಡ ಎಷ್ಟು ಪ್ರಮಾಣದಲ್ಲಿ ತಿದ್ದುಪಡಿ ಮಾಡಬಹುದಾಗಿದೆ; | 1978ರ ಕರ್ನಾಟಕ ನಾಗರೀಕ ಸೇವಾ ಕಾಯ್ದೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವಾಗ ಶೇಕಡ ಇಂತಿಷ್ಟೆ ಪ್ರಮಾಣದಲ್ಲಿ ತಿದ್ದುಪಡಿ ಮಾಡಬೇಕು ಎಂದು ನಿಗದಿಪಡಿಸಿರುವುದಿಲ್ಲ. |
| (ಇ) | ಸೃಜಿಸಿರುವ ವಿವಿಧ ವೃಂದಗಳ ಹುದ್ದೆಗಳನ್ನು ಮುಂಬಡ್ತಿಯಿಂದ ತುಂಬಲು ನಿಯಮಗಳು ಚಾಲ್ತಿಯಲ್ಲಿದ್ದು ಈ ಹುದ್ದೆಗಳನ್ನು ಗುತ್ತಿಗೆ ಆಧಾರ ಅಥವಾ ನೇರ ನೇಮಕಾತಿಯ ಮೇಲೆ ತುಂಬಲು ನಿಯಮಾವಳಿಗಳ ಸಡಿಲಿಕೆ ಸಂವಿಧಾನದ ಅನುಚ್ಛೇದ 109ರ ಉಲ್ಲಂಘನೆ ಯಾಗುವುದಿಲ್ಲವೇ ಈ ರೀತಿ ತಿದ್ದುಪಡಿ ಮಾಡುವುದರಿಂದ ಕಾರ್ಯ ನಿರ್ವಹಿಸುತ್ತಿರುವ ನೌಕರರು ಮುಂಬಡ್ತಿಯಿಂದ ವಂಚಿತರಾಗುವುದಿಲ್ಲವೆ; | ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ಸಿಬ್ಬಂದಿಗಳ ನೇಮಕಾತಿ ವಿಧಾನ ಕುರಿತಂತೆ ಎಐಸಿಟಿಇ ಅಧಿಸೂಚನೆ ಸಂಖ್ಯೆ: F.No.61-1/RIFD/7th CPC/2016-17, ದಿನಾಂಕ: 01.03.2019ರ ಕ್ರಮಾಂಕ 2.1ರಲ್ಲಿ ಈ ಕೆಳಕಂಡಂತೆ ಮಾನದಂಡವನ್ನು ನಿಗದಿಪಡಿಸಲಾಗಿದೆ. |

| Sl. No. | Designations of Teaching Faculty | Entry Pay (Rs.) | Level | Mode of Appointment |
|---|---|---|---|---|
| 1. | Lecturer | 56,100 | 9A | Direct Recruitment |
| 2. | Lecturer | 57,700 | 10 | Promotion / Direct Recruitment |

<table>
<tr>
<td>(ಈ)</td>
<td>ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನುಸಾರ ಕನಿಷ್ಠ 3 ಹುದ್ದೆಗಳಿಗೆ ಮುಂಬಡ್ತಿ ಅವಕಾಶ ಕಲ್ಪಿಸುವುದು ನ್ಯಾಯಸಮ್ಮತವಾಗಿದ್ದು, ಮುಂಬಡ್ತಿಯಿಂದ ವಂಚಿಸುವಂತಹ ನಿಯಮಗಳನ್ನು ರೂಪಿಸುವುದು ನ್ಯಾಯಾಲಯದ ತೀರ್ಪಿನ ಉಲ್ಲಂಘನೆ ಅಲ್ಲವೇ?</td>
<td>
<table>
<tr><td>3.</td><td>Lecturer (Senior Scale)</td><td>68,900</td><td>11</td><td>Direct Recruitment</td></tr>
<tr><td>4.</td><td>Lecturer (Selection Grade -I)</td><td>79,800</td><td>12</td><td>Direct Recruitment</td></tr>
<tr><td>5.</td><td>Lecturer (Selection Grade -II)</td><td>131,400</td><td>13A1</td><td>Direct Recruitment</td></tr>
<tr><td>6.</td><td>Head of the Department (HoD)</td><td>131,400</td><td>13A1</td><td>Direct Recruitment</td></tr>
<tr><td>7.</td><td>Principal</td><td>131,400</td><td>13A1</td><td>Promotion / Direct Recruitment</td></tr>
</table>
ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ 2006 ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಕುರಿತಂತೆ ನೂತನ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ದಿನಾಂಕ:15.03.2022ರಂದು ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
</td>
</tr>
</table>

ಇಡಿ 44 ಟಿಪಿಇ 2022

(ಡಾ॥ ಅಶ್ವತ್ಥನಾರಾಯಣ್.ಸಿ.ಎನ್)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ ಸಚಿವರು